Commission ರವರು identify ಮಾಡಿದ್ದಾರೆ. ಆ feasibility ಯನ್ನು ಸ್ಟಡಿ ಮಾಡಿ ಈ ಭಾಗದ ಜನರಿಗೆ ನೀರನ್ನು ಕೊಡುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತೇವೆ. ನೀರನ್ನು ಕೊಡುತ್ತೇವೆಂದು ನನಗೆ ವಿಶ್ವಾಸ ಇದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಮಾನ್ಯ ಎಂ.ಡಿ.ಕೃಷ್ಣಪ್ಪನವರದು.

ಶ್ರೀ ವಿ.ಮುನಿಯಪ್ಪ: ಮಾನ್ಯ ಅಧ್ಯಕ್ಷರೆ, ಸಣ್ಣ ಕ್ಲಾರಿಫಿಕೇಶನ್ ಇದೆ.

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆಯಲ್ಲಿ ಕ್ಲಾರಿಫಿಕೇಶನ್ ಇರುವುದಿಲ್ಲ. ಈ ವಿಷಯದ ಬಗ್ಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ತರುತ್ತೇವೆಂದು ಹೇಳಿದ್ದೀರಿ. ಆ ಮೂಲಕ ತಂದು ಮಾತನಾಡಿ. ಈಗ ಅವಕಾಶ ಕೊಡುವುದಿಲ್ಲ. ನೀವು ಮಾತನಾಡುವುದು ದಾಖಲೆಗೆ ಹೋಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅರ್ಧಗಂಟೆ ಕಾಲವಧಿ ಚರ್ಚೆಗೆ ಕೊಡಿ.

ಈ) ವಿಷಯ: ಕೊಬ್ಬರಿಗೆ ಬೆಂಬಲ ಬೆಲೆಯನ್ನು ಹೆಚ್ಚಿಸುವ ಕುರಿತು.

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರವು ಕೊಬ್ಬರಿ ಬೆಳೆಗೆ ಐದು ಸಾವಿರ ರೂ.ಗಳ ಬೆಂಬಲ ಬೆಲೆಯನ್ನು ನೀಡಿ ನಫೆಡ್ ಮೂಲಕ ಖರೀದಿಸುವ ಬಗ್ಗೆ ಮಾನ್ಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮತ್ತು ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೆ, "ಸರ್ಕಾರದ ಆದೇಶ ಸಂಖ್ಯೆ: ಸಇ 132 ಎಂಆರ್ಇ 2010 ದಿನಾಂಕ 15/05/2010 ರಲ್ಲಿ 2010–11ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೇಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.4,700–00 ಗಳನ್ನು ಘೋಷಿಸಿದ್ದು, ಈ ಬೆಲೆಗಿಂತ ರಾಜ್ಯದ ಮಾರುಕಟ್ಟೆಗಳಲ್ಲಿ ಬೆಲೆ ಕಡಿಮೆಯಾದಲ್ಲಿ ಸದರಿ ಬೆಲೆಯಲ್ಲಿ ರೈತರಿಂದ ಉಂಡೆ ಕೊಬ್ಬರಿಯನ್ನು ಖರೀದಿಸಲು ಆದೇಶ ಹೊರಡಿಸಿದೆ. ನಾಫೇಡ್ ಸಂಸ್ಥೆಯನ್ನು ಖರೀದಿ ಸಂಸ್ಥೆಯನ್ನಾಗಿ ಹಾಗೂ ಕರ್ನಾಟಕ ರಾಜ್ಯ ಸಹಕಾರ

ಮಾರಾಟ ಮಹಾಮಂಡಳ, ಬೆಂಗಳೂರು ಇವರನ್ನು ಕೊಬ್ಬರಿ ಖರೀದಿಸಲು ಅಗತ್ಯವಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಗುರುತಿಸಲಾಗಿದೆ."

ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ದಿನಾಂಕ: 20.04.2010 ರಲ್ಲಿ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದ್ದಾರೆ. ಅದರಲ್ಲಿ 4,700 ರೂ.ಗಳ ಬೆಂಬಲ ಬೆಲೆ ಕೊಡುತ್ತೇವೆಂದು ಹೇಳಿದ್ದಾರೆ. ಅದರ ಮಾನ್ಯ ಮುಖ್ಯಮಂತ್ರಿಗಳು ಅರಸೀಕೆರೆ ಮತ್ತು ತಿಪಟೂರಿಗೆ ಬಂದಾಗ ನಾಳೆಯಿಂದಲೇ ಖರೀದಿ ಮಾಡುತ್ತೇವೆಂದು ಮೇ ತಿಂಗಳಿನಲ್ಲಿಯೇ ಹೇಳಿದ್ದರು. ಇವತ್ತು ಕೊಬ್ಬರಿ ಬೆಲೆ ಏನಾಗಿದೆ ಎಂದರೆ, ಮಾರುಕಟ್ಟೆಯಲ್ಲಿರುವ ವ್ಯಾಪಾರಸ್ಥರ ಒಂದು ಹಿಡಿತದಲ್ಲಿದೆ. ಅವರಿಗೆ ಬೇಕಾದಾಗ ಬೆಲೆ ಜಾಸ್ತಿ ಮಾಡುತ್ತಾರೆ, ಬೇಡವಾದಲ್ಲಿ ಕಡಿಮೆ ಮಾಡುತ್ತಾರೆ. ಇವತ್ತು ಕೇವಲ 4200, 4300 ರೂಪಾಯಿ ಕೊಬ್ಬರಿ ಬೆಲೆ ಮಾರುಕಟ್ಟೆಯಲ್ಲಿದೆ. ದಯಮಾಡಿ ಯಾವಾಗಿನಿಂದ ಖರೀದಿ ಮಾಡುತ್ತೀರಿ? ಈ ಆದೇಶ ಯಾವಾಗ ಜಾರಿಯಾಗುತ್ತದೆನ್ನುವುದನ್ನು ಹೇಳಬೇಕು. ನಫೆಡ್ ವತಿಯಿಂದ ಕೇಂದ್ರ ಸರ್ಕಾರ 4,700 ರೂ. ಗಳನ್ನು ಕೊಡುತ್ತಿರುವುದು ಆದರೆ ರಾಜ್ಯ ಸರ್ಕಾರದ ಕೊಡುಗೆ ಏನು? ಕಳೆದ ಬಾರಿ ಇದೆ ಸರ್ಕಾರದಲ್ಲಿ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಿದ್ದಾಗ 5000 ರೂ.ಗಳ ಬೆಂಬಲ ಬೆಲೆಯನ್ನು ಮಾಡಿದ್ದರು. ಮಾನ್ಯ ಯಡಿಯೂರಪ್ಪನವರು ಕಳೆದ ಬಾರಿ 5000 ರೂ.ಗಳಂತೆ ಖರೀದಿ ಮಾಡುವುಕ್ಕೆ ಆದೇಶವನ್ನು ಮಾಡಿ ನಫೆಡ್‌ನ್ನು ಜಾರಿಗೆ ಮಾಡಿದರು. ಇವತ್ತು 4700 ರೂ.ಗಳನ್ನು ಕೇಂದ್ರ ಸರ್ಕಾರ ಕೊಡುವುದಾದರೆ ರಾಜ್ಯ ಸರ್ಕಾರದ ಕೊಡುಗೆ ಏನು? ನಾನು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಕಳೆದ ಬಾರಿ ಏನಿತ್ತು ಅದೆ ರೀತಿ 5000 ರೂ.ಗಳನ್ನು ಕೊಡಬೇಕು. ಆ ಭಾಗದ ಅನೇಕ ಜನ ರೈತರು ಕೊಬ್ಬರಿ ಬೆಳೆಯನ್ನು ನಂಬಿ ಜೀವನ ಮಾಡತಕ್ಕಂತವರಾಗಿರುತ್ತಾರೆ. ಅವರಿಗೆ ಅನ್ಯಾಯವಾಗಬಾರದು. ಆ ನಿಟ್ಟಿನಲ್ಲಿ ಯಾವತ್ತಿನಿಂದ ನಫೆಡ್‌ನಿಂದ ಖರೀದಿ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ಈ ಸಂದರ್ಭದಲ್ಲಿ ಹೇಳಬೇಕು.

ಶ್ರೀ ಸಿ ಎಸ್ ಪುಟ್ಟೇಗೌಡ: ಇದು ಎಲ್ಲಾ ಭಾಗಕ್ಕೂ ಅನ್ವಯವಾಗಬೇಕು.

ಶ್ರೀ ಕೆ ಎಂ ಶಿವಲಿಂಗೇಗೌಡ: ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಕೊಬ್ಬರಿಯನ್ನು ಬೆಳೆಯುತ್ತಾರೆ ಆ ಭಾಗದಲ್ಲಿ ಎಲ್ಲಾ ಕಡೆ ಮಾಡಿ, ಇವತ್ತು ರೈತರು ವಿಷ ಕುಡಿಯುವ ಸ್ಟೇಜಿಗೆ ಬಂದಿದ್ದಾರೆ. ದಯಮಾಡಿ ಕೂಡಲೇ 5000 ರೂ.ಗಳ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ.

ಅಧ್ಯಕ್ಷರು: ಆಯಿತು, ಉತ್ತರವನ್ನು ಹೇಳಿ.

ಶ್ರೀ ಶಿವರಾಜ್ ಎಸ್ ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ನಬಾರ್ಡ್ ಸಂಸ್ಥೆಗೆ ಈಗಾಗಲೇ ಕೇಂದ್ರ ಸರ್ಕಾರ ಆದೇಶ ಮಾಡಿತ್ತು. ಆದರೆ ಒಂದು ಸಮಸ್ಯೆ ಇತ್ತು, ಹ್ಯಾಂಡಲಿಂಗ್ ಚಾರ್ಜ್‌ನ್ನು ಭರಿಸಲು ಕೇಂದ್ರ ಸರ್ಕಾರ ಅನುಮತಿಯನ್ನು ಕೊಟ್ಟಿರಲಿಲ್ಲ. ಅದಕ್ಕೆ ತಕ್ಷಣ ಕೊಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಮನವಿ ಮಾಡಿದಾಗ ಈಗಾಗಲೇ ಅವರಿಂದ ನಮಗೆ ಪತ್ರ ಬಂದಿದೆ. ದಿನಾಂಕ:3.07.2010 ರಿಂದ ತಿಪಟೂರು ಹಾಗೂ ಅರಸೀಕೆರೆಯಲ್ಲಿ ಖರೀದಿ ಕೇಂದ್ರವನ್ನು ಪ್ರಾರಂಬಿಸಲಿಕ್ಕೆ ಈಗಾಗಲೇ ಸಂಸ್ಥೆಯವರಿಗೆ ಆದೇಶವನ್ನು ಮಾಡಿದ್ದೇವೆ. ಮೊದಲು ಈ ಎರಡರಲ್ಲಿ ಪ್ರಾರಂಭ ಮಾಡುತ್ತೇವೆ. ಮುಂದೆ ನಮ್ಮ ಹಿರಿಯ ಸದಸ್ಯರು ಹೇಳಿದಂತೆ ಚನ್ನರಾಯಪಟ್ಟಣ ಮತ್ತು ತುರುವೇಕೆರೆ, ಕೆ.ಆರ್. ಪೇಟೆಯ ಜೊತೆಗೆ ಮೂರು-ನಾಲ್ಕು ಊರುಗಳನ್ನು ಸಜೆಸ್ಟ್ ಮಾಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಲಿಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್ ಡಿ ರೇವಣ್ಣ: 3ನೇ ತಾರೀಖಿನಿಂದ ಅಲ್ಲಿಯೂ ಕೂಡ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ.

ಶ್ರೀ ಎಂ ಟಿ ಕೃಷ್ಣಪ್ಪ: ರಾಜ್ಯ ಸರ್ಕಾರದ ಕೊಡುಗೆ ಏನು ಸ್ವಾಮಿ. ಇವರು 5000 ರೂ.ಗಳನ್ನು ಮಾಡುತ್ತೇವೆಂದು ಹೇಳಬೇಕು. ರೈತರಿಗೆ ಏಕೆ ಅನ್ಯಾಯ ಮಾಡುತ್ತೀರಿ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಪರಿಶೀಲನೆ ಮಾಡುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಎಂ ಟಿ ಕೃಷ್ಣಪ್ಪ: ಕೇಂದ್ರ ಸರ್ಕಾರದ ಫಂಡನ್ನು ಡೈವರ್ಟ್ ಮಾಡುವುದಕ್ಕೆ ಏನು ತೊಂದರೆಯಿಲ್ಲ. ರೈತರಿಗೆ ರಾಜ್ಯ ಸರ್ಕಾರದಿಂದ ಕೊಡುಗೆ ಏನು? ನಮ್ಮದು ರೈತರ ಸರ್ಕಾರ ಎಂದು ಬೆಳಗ್ಗೆ ಭಾಷಣ ಮಾಡಿ ರೈತರಿಗೆ 300 ರೂ.ಗಳನ್ನು ಕೊಡುವುದಕ್ಕಾಗುವುದಿಲ್ಲವೆಂದರೆ ನಾವು ಏನು ಅನ್ನಬೇಕು. ದಯಮಾಡಿ ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತೇನೆ. ಮಿನಿಮಮ್ 5000 ರೂ.ಗಳೆಂದು ಘೋಷಣೆ ಮಾಡಬೇಕು. ನೀವು ಆದೇಶವನ್ನು ಮಾಡುತ್ತೀರಾ ನೀವು ಬೆಂಬಲ ಬೆಲೆಯನ್ನು ಹೆಚ್ಚು ಕಡಿಮೆ ಮಾಡದೇ ಹಿಂದೆ 5000 ರೂ.ಗಳೆಂದು ಇರುತ್ತದೆ ಅದನ್ನೆ ಘೋಷಣೆ ಮಾಡಬೇಕೆಂದು ಕೇಳುತ್ತೇನೆ. ಕೇಂದ್ರ ಸರ್ಕಾರ 4700 ರೂ.ಗಳನ್ನು ಕೊಡುತ್ತದೆ ಇದರಲ್ಲಿ ನಿಮ್ಮ ಕೊಡುಗೆ ಏನು ಎನ್ನುವುದರ ಬಗ್ಗೆ ಪ್ರಶ್ನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ನಫೆಡ್ ಸಂಸ್ಥೆಯವರಿಗೆ ಕೊಬ್ಬರಿಯನ್ನು ಖರೀದಿ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ನಫೆಡ್ ಸಂಸ್ಥೆಯವರಿಗೆ ಎರಡು ಖರೀದಿ ಕೇಂದ್ರದಲ್ಲಿ 4700 ರೂ. ಗಳಂತೆ ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ. ಕೊಬ್ಬರಿ ಬೆಳೆಯು ರಾಜ್ಯದಲ್ಲಿ ಇಳಿಕೆ ಕಂಡಿರುವುದರಿಂದ ರೈತರು ಸಂಕಷ್ಟದಲ್ಲಿದ್ದು ಅದನ್ನು ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ನಫೆಡ್ ಸಂಸ್ಥೆಯವರು ಕೊಬ್ಬರಿಯನ್ನು ಖರೀದಿ ಮಾಡುವಾಗ ಒಳ್ಳೆಯ ಗುಣಮಟ್ಟದ್ದು 75% ಅದರಲ್ಲಿ ತೆಗೆದುಕೊಳ್ಳುತ್ತಾರೆ. ರೈತರಿಗೆ ನೀಡಲು ಆವರ್ತ ನಿಧಿ ಇದೆ.

ಶ್ರೀ ಕೆ ಎಂ ಶಿವಲಿಂಗೇಗೌಡ: ಒಂದು ತೆಂಗಿನ ಕಾಯಿಗೆ ಕೇವಲ 4 ರೂ.ಗಳು ಮಾಡುತ್ತಾರೆ ಸ್ವಾಮಿ ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು.

ಅಧ್ಯಕ್ಷರು: ಮಾನ್ಯ ಸಚಿವರಿಗೆ ಮೊದಲು ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಕೊಬ್ಬರಿಯನ್ನು ಖರೀದಿ ಮಾಡಲು ಸರ್ಕಾರದು 2010-11ನೇ ಸಾಲಿನಲ್ಲಿ ಕೇಂದ್ರ ಸರ್ಕಾರದು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ. ಗುಣಮಟ್ಟದ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.ಗಳ 4,700 ಗಳನ್ನು ಘೋಷಿಸಿದೆ. ಅದರ ಪ್ರಕಾರ ಅವರು ಕೊಬ್ಬರಿಯನ್ನು ಖರೀದಿ ಮಾಡುತ್ತಾರೆ. ಮಾನ್ಯ ಕೃಷ್ಣಪ್ಪನವರು ಬೆಂಬಲ ಬೆಲೆಯನ್ನು 5000 ರೂ.ಗಳಿಗೆ ಹೆಚ್ಚಿಸಬೇಕೆಂದು ಹೇಳಿರುತ್ತಾರೆ. 4700 ರೂ.ಳಂತೆ ಕೊಬ್ಬರಿಯನ್ನು ಖರೀದಿ ಮಾಡಲು ಕೇಂದ್ರ ಸರ್ಕಾರ ಆದೇಶ ಮಾಡಿದೆ. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅವರ ಜೊತೆಯಲ್ಲಿ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಲು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಸದನವು ನಾಳೆ ಬೆಳಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 5 ಗಂಟೆ 45 ನಿಮಿಷಕ್ಕೆ ಮುಕ್ತಾಯಗೊಂಡು ದಿನಾಂಕ:2.7.2010ರ ಬೆಳಗ್ಗೆ 10.00 ಗಂಟೆಗೆ ಪುನ: ಸಮಾವೇಶಗೊಳ್ಳುವುದು)

8. ಅನುಬಂಧ – ಅ:

ವಿಷಯ: ವೃತ್ತಿ ಆಧಾರಿತ ಕೋರ್ಸ್‌ನ ತರಗತಿಗಳು

31(273) ಶ್ರೀ ಗೋಪಾಲ ಭಂಡಾರಿ:(ಕಾರ್ಕಳ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ.ಓ.ಸಿ ತರಗತಿಗಳನ್ನು ಈ ಶೈಕ್ಷಣಿಕ ವರ್ಷದಿಂದ ಮುಚ್ಚಲಾಗಿದೆಯೇ

ಆ) ಅವುಗಳನ್ನು ಮುಚ್ಚುವ ಆದೇಶ ಮಾಡಲು ಕಾರಣವೇನು.

ಇ) ಶಿಕ್ಷಕರ ವರ್ಗಾವಣೆ ಮಾಡಲಾದ ಅನುಸರಿಸುತ್ತಿರುವ ಕಾಲಮಿತಿ 5 ವರ್ಷವೆ ಅಥವಾ 10 ವರ್ಷವೆ?